ಇದ್ದಾರೆ, ಅವರು ಏಕೆ ಆ ಬಗ್ಗೆ ಪ್ಲಾನ್ ಎಸ್ಟಿಮೇಟ್ ಮಾಡಿ ಕಳುಹಿಸಬಾರದು ? 50ಪರ್ಸೆಂಟ್ ರಾಜ್ಯ ಸರ್ಕಾರ ಮತ್ತು 50 ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುತ್ತಿದೆ. ಬರೀ ಪ್ಲಾನ್ ಎಸ್ಟಿಮೇಟ್ ಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಿಕೊಟ್ಟರೆ ಆ ಕೆಲಸ ಮುಗಿಯುತ್ತದೆ. ಕೇಂದ್ರ ಸರ್ಕಾರಕ್ಕೆ ಕಳಿಸುವ ಸಲುವಾಗಿ ಅಂದಾಜುಪಟ್ಟಿ ಏಕೆ ತಾವು ಕಳಿಸಬಾರದು? ಇದರಲ್ಲಿ ಡಿಫಿಕಲ್ಟಿ ಏನಿದೆ ? ಅಲ್ಲಿ ಸ್ಟೇಡಿಯಂ ಕಟ್ಟುವ ಸಲುವಾಗಿ 4 ಎಕರೆ ಜಾಗವನ್ನು ಸಾರ್ವಜನಿಕರು ಪುಕ್ಕಟೆಯಾಗಿ ಕೊಟ್ಟಿದ್ದಾರೆ.

ಶ್ರೀ ಎಸ್.ರಮೇಶ್:- ಹಿರಿಯ ಸದಸ್ಯರಾದ ಕೌಜಲಗಿಯವರಿಗೆ ಗೊತ್ತಿದೆ, ತಾಲ್ಲೂಕುಮಟ್ಟದಲ್ಲಿ ಸ್ಟೇಡಿಯಂ ಪ್ರಾರಂಭ ಮಾಡಿದ್ದೇವೆ, ಯಾವಾಗ ಪ್ರಾರಂಭ ಮಾಡುತ್ತೇವೆ ಅಂದರೆ ಇಲಾಖೆಗೆ ಅಷ್ಟೂ ಜಮೀನು ಒಪ್ಪಿಸಬೇಕು, ಆಗ ನಾವು ಎಸ್ಟಿಮೇಟ್ ಮಾಡುತ್ತೇವೆ. ಈ ಒಂದೂ ಪ್ರೊಸೀಜರ್ ಫಾಲೋ ಮಾಡದೆ ಅವರು 70 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದಕ್ಕೇ ನಾವು ಏನು ಮಾಡಿದ್ದೇವೆ ಅಂದರೆ ಅರ್ಧಂಬರ್ಧ ಕೆಲಸ ನಿಲ್ಲಬಾರದು ಆಟ ಆಡುವ ರೀತಿಯಲ್ಲಾದರೂ ಮಾಡಬೇಕು ಎಂದು ಫೀಲ್ಡ್ ಡೆವಲಪ್‌ಮೆಂಟ್ ಫಂಡ್ ಎಂದು ಒಂದು ಲಕ್ಷ ರೂಪಾಯಿಗಳನ್ನು ನಮ್ಮ ಇಲಾಖೆವತಿಯಿಂದ ಕೊಡುವುದಕ್ಕೆ ಸಾಧ್ಯ ತಾಲ್ಲೂಕು ಮಟ್ಟದಲ್ಲಿ ಸ್ಟೇಡಿಯಂ ಮಾಡಬೇಕೆಂದರೆ ದಯವಿಟ್ಟು ನನಗೆ ಕಾಗದ ಬರೆಯಿರಿ, ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಿ ಜಮೀನು ನಮ್ಮ ಇಲಾಖೆಗೆ ವರ್ಗಾಯಿಸಿ, ಅನಂತರ ನಾವು ಪರಿಶೀಲಿಸುತ್ತೇವೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ:- ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ಸ್ ಕಳುಹಿಸುವುದಕ್ಕೆ ನಿಮಗೆ ಏನು ಡಿಫಿಕಲ್ಟಿ ಇದೆ ಎಂದು ನಾನು ಕೇಳುತ್ತೇನೆ. ನಮ್ಮ ಸರ್ಕಾರದ ರೊಕ್ಕ ಬೆಡ. ತಾವು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ ಸಂತೋಷ. 4 ಲಕ್ಷ ರೂಪಾಯಿಗಳಲ್ಲಿ ಸ್ಟೇಡಿಯಂ ಅಂದರೆ 50 ಭಾಗ ಕೇಂದ್ರದವರು ಕೊಡುತ್ತಾರೆ, 50 ಪರ್ಸೆಂಟ್ ರಾಜ್ಯ ಸರ್ಕಾರ ಕೊಡುತ್ತದೆ. ಕೇಂದ್ರ ಕೊಡುವ 50 ಭಾಗದ ಸಲುವಾಗಿ ತಾವು ಬರೀ ಪ್ರಪೋಸಲ್ ಕಳುಹಿಸುವುದಕ್ಕೆ ಏನು ಡಿಫಿಕಲ್ಟಿ ಇದೆ ? ನಮ್ಮ ಎಂ.ಪಿ.ಹೇಳುತ್ತಾರೆ ನೀವು ಪ್ರಪೋಸಲ್ ಕಳಿಸಿಕೊಡಿ, ನಾವು ಮಾಡಿಸಿಕೊಡುತ್ತೇವೆ, ಪ್ರಪೋಸಲ್ ಬರದೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಪ್ರಪೋಸಲ್ ಕಳಿಸುವುದಕ್ಕೆ ನಿಮಗೆ ಏನು ತೊಂದರೆ ಇದೆ ?

ಶ್ರೀ ಎಸ್.ರಮೇಶ್:- ಶ್ರೀಮಾನ್ ಕೌಜಲಗಿಯವರು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಕೇಂದ್ರದಿಂದ ನಮಗೆ 50 ಪರ್ಸೆಂಟ್ ಮ್ಯಾಚಿಂಗ್ ಗ್ರಾಂಟ್ ಬರುತ್ತದೆ. ಪಬ್ಲಿಕ್ ಕಾಂಟ್ರಿಬ್ಯೂಷನ್ ನಾವು ಎಕ್ಪೆಬೇಕಾಗುತ್ತದೆ. ಅದಕ್ಕೆ ಸಮವಾಗಿ ರಾಜ್ಯ ಸರ್ಕಾರದಿಂದಲೂ ಕೊಡಬೇಕಾಗುತ್ತದೆ. ಕೇಂದ್ರಕ್ಕೆ ಬರೆಯುವ ಪ್ರಶ್ನೆ ಯಾವಾಗ ಉದ್ಭವವಾಗುತ್ತದೆ ಎಂದರೆ, ಅವರು ನಮ್ಮ ಇಲಾಖೆಯನ್ನು ಸಂಪರ್ಕಿಸಿ ಬರೆಯಿರಿ ಎಂದು ಹೇಳಬೇಕು ತಾನೆ ? ಅವರೇ 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಸ್ಟೇಡಿಯಂ ಮಾಡಬೇಕೆಂದು ನಮಗೂ ಆಸೆ ಇದೆ.

ಮಂಚನ ಬೆಲೆ ಅಣೆಕಟ್ಟು

(1463) ಶ್ರೀ ಅಂಜನಮೂರ್ತಿ (ನೆಲಮಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಮಂಚನಬೆಲೆ ಅಣೆಕಟ್ಟೆಗೆ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ ಎಷ್ಟು ಕುಟುಂಬಗಳು ಈ ಯೋಜನೆಯಿಂದ ಜಮೀನುಗಳನ್ನು ಕಳೆದುಕೊಡಿರುತ್ತಾರೆ;

ಇ ನೆಲಮಂಗಲ ಮತಕ್ಷೇತ್ರಕ್ಕೆ ಸೇರಿದ ದಾಸನಪುರ ಹೋಬಳಿ ಕಡಬಗೆರೆ ಬಳಿ ಈ ಮೇಲ್ಕಂಡ

ಯೋಜನೆಯಿಂದ ಜಮೀನು ಕಳೆದುಕೊಂಡ ಎಷ್ಟು ಕುಟುಂಬಗಳಿಗೆ ತಲಾ ಎಷ್ಟು ಎಕರೆ ಜಮೀನುಗಳನ್ನು ಹಾಗೂ ವಸತಿ ಸೌಕರ್ಯಗಳನ್ನು ಸರ್ಕಾರದಿಂದ ಒದಗಿಸಲಾಗಿದೆ ?

ಶ್ರೀ ಮಲ್ಲಾರಿಗೌಡ.ಎಸ್.ಪಾಟೀಲ್ (ಬಾರಿ ಮತ್ತು ಮುದ್ಕಮ ನೀರಾವರಿ ಮಂತ್ರಿಗಳು)

ಅ 682 ಎಕರೆಗಳು.

ಆ 165 ಕುಟುಂಬಗಳು.

ಇ ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಅನುಬಂಧ

(ವಿಧಾನಸಭಾ ಸದಸ್ಯರಾದ ಶ್ರೀ ಅಂಜನಾಮೂರ್ತಿ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1463)

ಮಂಚನಬೆಲೆ ಜಲಾಶಯದಲ್ಲಿ ಮುಳುಗಡೆಯಾದ ಗ್ರಾಮಗಳ ನಿವಾಸಿಗಳಿಗೆ ನೆಲಮಂಗಲ ಕ್ಷೇತ್ರಕ್ಕೆ ಸೇರಿದ ದಾಸನಪುರ ಹೋಬಳಿ ಕಡಬಗೆರೆ ಬಳಿ ವಿತರಣೆಯಾಗಿರುವ ಜಮೀನು ಮತ್ತು ಸೈಟುಗಳ ವಿವರ.

ಕ್ರ.ಸಂ.	ಕುಟುಂಬದ ಹೆಸರು	ಜಮೀನು ಎಕರೆಗಳಲ್ಲಿ	ಸೈಟು ಸಂ.
1	ಕುರಿಹಟ್ಟಿ ರಂಗಯ್ಯ ಬಿನ್ ಬಿ.ಗುಡ್ಡಯ್ಯ	1.00	1
2	ಮುನಿಬೈರಕ್ಕ ಬಿನ್ ಬೈರಕ್ಕ	10.00	5
3	ಚೆಲುವೇಗೌಡ ಬಿನ್ ವೀರಬುದ್ದೇಗೌಡ	5.00	8
4	ಮೂಡಲಗಿರಿಯಪ್ಪ ಬಿನ್ ರಂಗಯ್ಯ	2.00	3
5	ರಾಮಯ್ಯ ಬಿನ್ ಚನ್ನಯ್ಯ	1.00	2
6	ರುದ್ರಯ್ಯ ಬಿನ್ ಹನುಮಯ್ಯ	2.00	1
7	ರಂಗಯ್ಯ ಬಿನ್ ತಿಮ್ಮಪ್ಪ	3.00	3
8	ರಂಗಯ್ಯ ಬಿನ್ ದೊಡ್ಡ ರಂಗಯ್ಯ	6.00	7
9	ನಂಜಣ್ಣ ಬಿನ್ ಕಪನಯ್ಯ	1.30	4
10	ಹೊನ್ನಯ್ಯ ಬಿನ್ ಕೆಂಡಯ್ಯ	2.00	2
11	ಹೊನ್ನತಿಮ್ಮಯ್ಯ ಬಿನ್ ಹೊನ್ನಗಿರಿಗೌಡ	2.00	3
12	ರಂಗಯ್ಯ ಬಿನ್ ಚಿಕ್ಕ ಕೆಂಪಗುಡ್ಡಯ್ಯ	1.00	1
13	ಚೆಲುವೇಗೌಡ ಬಿನ್ ವೀರಬುದ್ದೇಗೌಡ	1.00	1
14	ಕೆಂಪಗುಡ್ಡಯ್ಯ ಬಿನ್ ಚೆಲುವಯ್ಯ	7.00	9
15	ಮೂಡಲಗಿರಯ್ಯ ಬಿನ್ ರಂಗಯ್ಯ	-	1
		44.30	51

ಶ್ರೀ ಅಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆ ಪ್ರಶ್ನೆಯಲ್ಲಿ ಮಂಚನಬೆಲೆ ಅಣೆಕಟ್ಟಿಗೆ ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ 682 ಎಕರೆ ಎಂದೂ,

ಎರಡನೆ ಪ್ರಶ್ನೆಯಲ್ಲಿ ಎಷ್ಟು ಕುಟುಂಬಗಳು ಈ ಯೋಜನೆಯಿಂದ ಜಮೀನು ಕಳೆದುಕೊಂಡಿದೆ ಎಂದರೆ 165 ಕುಟುಂಬಗಳೆಂದೂ, ಉತ್ತರ ಕೊಟ್ಟಿದ್ದಾರೆ. ಮೂರನೇ ಪ್ರಶ್ನೆಯಲ್ಲಿ ನೆಲಮಂಗಲ ಮತಕ್ಷೇತ್ರಕ್ಕೆ ಸೇರಿದ ದಾಸನಪುರದ ಹೋಬಳಿ ಕಡಬಗೆರೆ ಬಳಿ ಈ ಯೋಜನೆಯಿಂದ ಜಮೀನು ಕಳೆದುಕೊಂಡ ಎಷ್ಟು ಕುಟುಂಬಗಳಿಗೆ ತಲಾ ಎಷ್ಟು ಎಕರೆ ಜಮೀನನ್ನು ಹಾಗೂ ವಸತಿ ಸೌಕರ್ಯಗಳನ್ನು ಸರ್ಕಾರದಿಂದ ಒದಗಿಸಲಾಗಿದೆ ಎಂದು ಕೇಳಿದ್ದಕ್ಕೆ ಪಟ್ಟಿಯನ್ನು ಕೊಟ್ಟಿದ್ದಾರೆ. ಇಲ್ಲಿ ಜಮೀನು ಕಳೆದುಕೊಂಡಿರುವವರ ಸಂಖ್ಯೆ165. ಅಕ್ಟೈರ್ ಆಗಿರುವುದು 182 ಎಕರೆ. ಇವರು ಇಲ್ಲಿ ಫಲಾನುಭವಿಗಳನ್ನು ಗುರುತಿಸಿರುವುದು 15. ಈ 15 ರಲ್ಲಿ ಜಮೀನುಗ್ರಾಂಟ್ ಮಾಡಿರುವುದು ಮತ್ತು ಸೈಟುಗಳನ್ನು ಕೊಟ್ಟಿರುವುದರಲ್ಲಿ ತಾರತಮ್ಯ ಇದೆ. ಒಬ್ಬರಿಗೆ ಹತ್ತು ಎಕರೆಗೆ ಐದು ಸೈಟು, ಮತ್ತು ಇನ್ನೊಬ್ಬರಿಗೆ ಏಳು ಎಕರೆ ಈ ರೀತಿಯಾಗಿದೆ. ಮತ್ತೆ ಅವರು ಹೇಳಿರುವ ಪ್ರಕಾರ, 165 ಕುಟುಂಬಗಳಲ್ಲಿ ಬರೀ 15 ಜನರನ್ನು ಗುರುತಿಸಿದ್ದಾರೆ. ಕಡಬಗೆರೆ ಎನ್ನುವುದು ನನ್ನ ಮತಕ್ಷೇತ್ರಕ್ಕೆ ಸೇರಿದ್ದು. ಅಲ್ಲಿ ಸುಮಾರು 40-50 ಕುಟುಂಬಗಳವರು ಸುಮಾರು 65ನೇ ಇಸವಿಯಿಂದ ಒಂದು ಎಕರೆ, ಎರಡು ಎಕರೆ, ಮುಕ್ಕಾಲು ಎಕರೆ ಈ ರೀತಿ ಉಳುಮೆಯನ್ನು ಮಾಡಿಕೊಂಡಿದ್ದಾರೆ. ಇದುವರೆಗೂ ಅವರಿಗೇ ಯಾವುದೇ ರೀತಿಯ ಕಾಗದಪತ್ರ ಮತ್ತೊಂದು ಏನೂ ಕೊಟ್ಟಿಲ್ಲ. ಈಗ ಅಲ್ಲಿ ಏನಾಗಿದೆ ಎಂದರೆ . . . .

ಅಧ್ಯಕ್ಷರು:- ಪ್ರಶ್ನೆ ಕೇಳಿ, ವಿವರಣೆ ಅಲ್ಲ.

ಶ್ರೀ ಅಂಜನಮೂರ್ತಿ:- ಅಲ್ಲಿಬಡ ಜನರೆ ಉಳುಮೆ ಮಾಡುತ್ತಿರುವ ಜಮೀನನ್ನು ಸರ್ಕಾರದವರು ಮೆಡಿಷನ್ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಕೊಟ್ಟಿದ್ದಾರೆ. ದಯಮಾಡಿ ಅದನ್ನು ರದ್ದು ಮಾಡಬೇಕು. ಅದನ್ನು ರದ್ದುಮಾಡದಿದ್ದರೆ ಬಡ ಕುಟುಂಬಗಳಿಗೆ ಅನ್ಯಾಯವಾಗುತ್ತದೆ. ಮತ್ತೆ ಅಲ್ಲೇನಾದರೂ ಬಡವರಿಗೆ ಸೈಟು ಅಥವಾ ಉಳುಮೆ ಮಾಡಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಅಲ್ಲಿ ರಣರಂಗವಾಗುತ್ತದೆ. ದಯಮಾಡಿ ತಮ್ಮ ಮೂಲಕ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಏನು ಅಲ್ಲಿ ಬಡವರು ಉಳುಮೆ ಮಾಡುತ್ತಿದ್ದಾರೋ, ಅವರಿಗೆ ಅದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಹೇಳಿಕೆಯನ್ನು ಕೊಡಬೇಕು.

ಶ್ರೀ ಮುಲ್ಲಾರಿಗೌಡ ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಅಂಜನಮೂರ್ತಿಯವರು ಹೇಳಿದ ಪ್ರಕಾರ, ಅವರ ಪ್ರಶ್ನೆಯನ್ನು ನೋಡಿದ ಮೇಲೆ ನನಗೆ ಕೂಡ ಅನಿಸಿದೆ. ಜಮೀನು ವಿತರಣೆಯಲ್ಲಿ ವ್ಯತ್ಯಾಸವಾಗಿದೆ. ಕೆಲವೊಂದು ಜನರಿಗೆ ಹತ್ತು ಎಕರೆ ಕೊಟ್ಟಿದ್ದಾರೆ, ಕೆಲವು ಜನರಿಗೆ ಏಳು ಎಕರೆ ಕೊಟ್ಟಿದ್ದಾರೆ, ಕೆಲವೊಂದು ಜನರಿಗೆ ಒಂದು ಎಕರೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಪೂರ್ಣ ವಿವರವಾಗಿ ಪರಿಶೀಲನೆ ಮಾಡಿ ಯೋಗ್ಯವಾಗಿ ಯಾರು ಅದಕ್ಕೆ ಫೀಸಿಬಲ್ ಇದ್ದಾರೆ, ಅಂಥ ಜನರಿಗೆ ಜಮೀನುಗಳನ್ನು ಕೊಡುವುದಕ್ಕೆ ನಾನು ಸರ್ವ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅದೇ ರೀತಿ ಯಾರದೋ ಒಂದು ಫ್ಯಾಕ್ಟರಿಗೆ ಸರ್ಕಾರ ಜಮೀನನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಬೇರೆ ಇಲಾಖೆಯಿಂದ ವರದಿಯನ್ನು ತರಿಸಿಕೊಂಡು ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ. ಅದಲ್ಲದೆ ಸುಮಾರು 165 ಕುಟುಂಬಗಳು ಈ ಒಂದು ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಜಮೀನುಗಳನ್ನು ಕೊಡುವುದಕ್ಕೆ ಸುಮಾರು 15 ಜನರನ್ನು ಮಾತ್ರ ನಾವು ಗುರುತಿಸಿದ್ದೇವೆ. ಅವರನ್ನು ಯಾವ ರೀತಿ ಗುರುತಿಸಿದ್ದಾರೋ ಅದೆಲ್ಲ ವಿವರವಾದ ವರದಿ ನನ್ನ ಕಡೆಯಲ್ಲ. ಅದೆಲ್ಲಾ ವಿವರವಾದ

ವರದಿಯನ್ನು ತರಿಸಿ ಅವರಿಗೆ ಮಾಹಿತಿಯನ್ನು ಪೂರ್ಣವಾಗಿ ಒದಗಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಅಂಜನಮೂರ್ತಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳಲ್ಲೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಏನಾದರೂ ಆ ಮೆಡಿಸಿನ್ ಫ್ಯಾಕ್ಟರಿಗೆ ಗ್ರಾಂಟ್ ಆಗಿರುವ ಜಮೀನನ್ನು ದಯವಾಡಿ ರದ್ದು ಮಾಡಿ ಆ ಬಡ ಕುಟುಬಗಳಿಗೆ ಕೊಡುವುದಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಆದರೂ ಸಹ ಒಂದು ಹೇಳಿಕೆಯನ್ನು ಕೊಡಬೇಕು.

Lift Irrigation Scheme hear Malalur village

(2366)Sri C.R.Sageer Ahmed (Chikkamaglore):- Will the Minister of State for Minor Irrigation be pleased to state

a Whether there is any new proposals for Lift Irrigation Scheme for the Atchkat coming under Malalur Village of Chickmagalur Taluk;

b If so, the area covered and benefited from this Lift Irrigation Scheme and the amount spent for the above scheme; (the date of completion of the above project be furnished)?

Sri K.S.Mallikarjuna Prasanna (Minister of State for Minor Irrigation)

a Yes

b Asper the preliminary investigation Report it is contemplated to provide irrigation benefit to an extent of 1000 acres. No expenditure has been incurred on this scheme so far.

This scheme is under preliminary investigation and if found feasible, the work will be taken up depending upon the availability of fund.

ಶ್ರೀ ಸಿ.ಆರ್.ಸಗೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಗ್ರಾಮದಲ್ಲಿ ಒಂದು ಏತನೀರಾವರಿ ಯೋಜನೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇದರಿಂದ ಒಂದು ಸಾವಿರ ಎಕರೆಯಷ್ಟು ಜಮೀನಿಗೆ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇದು ಪರಿಶೀಲನೆಯಲ್ಲಿದೆ, ಜೊತೆಗೆ ಹಣದ ಒಂದು ವ್ಯವಸ್ಥೆಯ ಮೇಲೆ ಈ ಕಾಮಗಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನನ್ನ ಪ್ರಶ್ನೆ ಏನೆಂದರೆ, ಇದು ಮೊದಲನೇ ಬಾರಿಗೆ ಚಿಕ್ಕ ಮಗಳೂರು ತಾಲ್ಲೂಕಿನಲ್ಲಿ ಏತನೀರಾವರಿಯ ಒಂದು ಪ್ರಶ್ನೆ ಉದ್ಭವವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ತಾವು ನಮ್ಮ ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವಾಗಿದ್ದರೂ ಸಹ